ಆಳಂದ ತೋಟಗಾರಿಕೆ

1049 (1255) ಶ್ರೀ ಸುಭಾಷ್. ಆರ್. ಗುತ್ತೇದಾರ್ (ಆಳಂದ) : ಸನ್ಮಾನ್ಯ ತೋಟಗಾರಿಕೆ ಮತ್ತು ಬಂಧೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಳಂದ ನಗರದಲ್ಲಿರುವ ತೋಟಗಾರಿಕೆ ಕಛೇರಿ ನಿವೇಶನದ ಅಳತೆ ಎಷ್ಟು? (ಎಕರೆ, ಗುಂಟೆ ವಿವರ ನೀಡುವುದು);

ಆ) ಆಳಂದ ತಾಲ್ಲೂಕಿನಲ್ಲಿರುವ ತೋಟಗಾರಿಕಾ ಇಲಾಖೆಯಲ್ಲಿ ಪ್ರಸ್ತುತ ಯಾವ್ಯಾವ ಬೆಳೆಗಳನ್ನು ಬೆಳೆಯಲಾಗುತ್ತಿದೆ;

ಇ) ತೋಟಗಾರಿಕೆ ಇಲಾಖೆಯಿಂದ ಆಳಂದ ತಾಲ್ಲೂಕಿನ ಗ್ರಾಮೀಣ ಜನರಿಗೆ ಯಾವ್ಯಾವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ (ವಿವರ ನೀಡುವುದು);

ಈ) ತೋಟಗಾರಿಕೆ ಇಲಾಖೆಯಿಂದ ಸೌಲಭ್ಯ ಪಡೆದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು (ವಿವರ ನೀಡುವುದು)?

ಶ್ರೀ ಉಮೇಶ್ ಕತ್ತಿ (ತೋಟಗಾರಿಕಾ ಮತ್ತು ಬಂಧೀಖಾನೆ ಸಚಿವರು) :

ಅ) 16 ಗುಂಟೆಗಳು.

ಆ) ಆಳಂದ ತಾಲ್ಲೂಕಿನಲ್ಲಿ ಪ್ರಮುಖವಾಗಿ ದ್ರಾಕ್ಷಿ, ಬಾಳೆ, ಮೋಸಂಬಿ, ನಿಂಬೆ, ಪಪ್ಪಾಯ, ಚಿಕ್ಕು, ದಾಳಿಂಬೆ, ಅಂಜೂರ, ಬದನೆ, ಟೋಮಾಟೊ, ಈರುಳ್ಳಿ, ಮೆಣಸಿನಕಾಯಿ, ಹಾಗಲಕಾಯಿ, ಸೌತೆಕಾಯಿ, ಹೀರೆಕಾಯಿ, ಬೆಂಡಿ, ಆಲೂಗಡ್ಡೆ, ಮೂಲಂಗಿ, ಕೋತಂಬರಿ, ಗಜ್ಜರಿ, ಅವರೆ ಇತ್ಯಾದಿಗಳನ್ನು ಬೆಳೆಯಲಾಗುತ್ತಿದೆ.

ಇ) ಈ ಕೆಳಕಂಡ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

1) ಮಾವು, ದ್ರಾಕ್ಷಿ, ಬಾಳೆ, ಮೋಸಂಬಿ, ನಿಂಬೆ, ಪಪಾಯ, ಚಿಕ್ಕು, ದಾಳಿಂಬೆ, ಅಂಜೂರ ಹಣ್ಣಿನ ಬೆಳೆಗಳ ಪ್ರದೇಶ ವಿಸ್ತರಣೆಗೆ ಸಹಾಯಧನ
2) ಸೇವಂತಿಗೆ, ಚೆಂಡು ಹೂ, ಮಲ್ಲಿಗೆ ಹೂವಿನ ಬೆಳೆಗಳ ಪ್ರದೇಶ ವಿಸ್ತರಣೆಗೆ ಸಹಾಯಧನ
3) ಎರೆಹುಳು ಗೊಬ್ಬರ ಘಟಕ, ಜೀವಸಾರ ಘಟಕ ಸ್ಥಾಪನೆಗೆ ಸಹಾಯಧನ

4) ಸಮಗ್ರ ಪೋಷಕಾಂಶ, ರೋಗ ಮತ್ತಿ ಪೀಡೆ ನಿರ್ವಹಣೆಗೆ ಸಹಾಯಧನ
5) ಹೊರ ರಾಜ್ಯ ಮತ್ತು ನಮ್ಮ ರಾಜ್ಯದಲ್ಲಿ ರೈತರ ಪ್ರವಾಸ ಹಾಗೂ ತರಬೇತಿ
6) ಮಲ್ಚಿಂಗ್, ನೆರಳು ಪರದೆ ಮತ್ತು ಪಕ್ಷಿ ನಿರೋಧಕ ಬಲೆ ಖರೀದಿಸಲು ಸಹಾಯಧನ
7) ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಅಳವಡಿಸಲು ಶೇ. 75 ರ ಸಹಾಯಧನ.
8) ತೋಟಗಾರಿಕೆಯಲ್ಲಿ ಯಾಮತ್ರೀಕರಣಕ್ಕೆ ಸಹಾಯಧನ
9) ಹಣ್ಣುಗಳ ಪ್ರದೇಶ ವಿಸ್ತರಣೆ, ತರಕಾರಿ ಬೀಜಗಳ ವಿತರಣೆ ಹಾಗೂ ರೈತ ಮತ್ತು ರೈತ ಮಹಿಳೆಯರಿಗೆ ತರಬೇತಿಗಾಗಿ ಸಹಾಯಧನ
10) ಬಾಳೆ, ಚಿಕ್ಕು, ಮಾವು, ನಿಂಬೆ, ತೆಂಗು ತೋಟಗಳ ಅಭಿವೃದ್ಧಿ

ಈ) 2009–10ನೇ ಸಾಲಿನಲ್ಲಿ ಸೌಲಭ್ಯ ಪಡೆದಿರುವ ಫಲಾನುಭವಿಗಳ ಸಂಖ್ಯೆ ಒಟ್ಟು 912.

ಇದರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣ ರೈತರು, ಮಹಿಳೆಯರು ಮತ್ತು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಫಲಾನುಭವಿಗಳು ಸಹ ಸೇರಿರುತ್ತಾರೆ.

ರಸ್ತೆ ಅಭಿವೃದ್ಧಿ

1050 (1256) ಶ್ರೀ ಸುಭಾಷ್ ಆರ್. ಗುತ್ತೇದಾರ್ (ಆಳಂದ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾಗದರಿ– ರಿಬ್ಬನಪಲ್ಲಿ ರಸ್ತೆಯು ಕರ್ನಾಟಕದಲ್ಲಿದೆಯೇ;

ಆ) ಹಾಗಿದ್ದಲ್ಲಿ, ಈ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಈ ರಸ್ತೆಯ ಅಭಿವೃದ್ಧಿ ಕಾಮಗಾರಿಗಾಗಿ ಟೆಂಡರ್ ಪ್ರಕ್ರಿಯೆಯು ಪ್ರಾರಂಭವಾಗಿದೆಯೇ;